**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1193 |
| ಸದಸ್ಯರ ಹೆಸರು | : | ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 13.03.2026. |
| ಉತ್ತರಿಸುವವರು | : | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | 2025-26ನೇ ಸಾಲಿನಲ್ಲಿ ರಾಜ್ಯದ ಗ್ರಾಮ ಪಂಚಾಯಿತಿಗಳಲ್ಲಿ ತೆರಿಗೆ ವಸೂಲಾತಿಗಾಗಿ ನಿಗದಿಪಡಿಸಿದ ಒಟ್ಟು ಗುರಿ ಎಷ್ಟು; ಈ ಪೈಕಿ ಫೆಬ್ರುವರಿ 18ರವರೆಗೆ ಸಂಗ್ರಹವಾಗಿರುವ ಮೊತ್ತ ಎಷ್ಟು; (ಜಿಲ್ಲಾವಾರು ವಿವರ ನೀಡುವುದು) | 2025-26ನೇ ಸಾಲಿನಲ್ಲಿ ರಾಜ್ಯದ ಗ್ರಾಮ ಪಂಚಾಯಿತಿಗಳಲ್ಲಿ ತೆರಿಗೆ ವಸೂಲಾತಿಗಾಗಿ ನಿಗದಿಪಡಿಸಿದ ಒಟ್ಟು ಗುರಿ ರೂ.4514.20 ಕೋಟಿಗಳು.<br><br>ಪ್ರಸ್ತುತ ಸಾಲಿನ ಗುರಿ ರೂ.1616.00 ಕೋಟಿಗಳು, ಈ ಪೈಕಿ ಫೆಬ್ರುವರಿ 18 ರವರೆಗೆ ಸಂಗ್ರಹವಾಗಿರುವ ಮೊತ್ತ ಒಟ್ಟು ರೂ. 1163.84 ಕೋಟಿಗಳು.<br><br>ಒಟ್ಟು ಗುರಿಗೆ ಶೇ. 26 ರಷ್ಟು ತೆರಿಗೆ ವಸಲಾತಿಯಾಗಿರುತ್ತದೆ.<br><br>ಪ್ರಸಕ್ತ ಸಾಲಿನ ಗುರಿಗೆ ಶೇ. 77 ತೆರಿಗೆ ವಸೂಲಾತಿಯಾಗಿರುತ್ತದೆ.<br><br>ಜಿಲ್ಲಾವಾರು ವಿವರವನ್ನು ಅನುಬಂಧ-1 ರಲ್ಲಿ ನೀಡಿದೆ. |
| (ಆ) | ವರದಿಯ ಪ್ರಕಾರ ಶೇ.71.39 ರಷ್ಟು ತೆರಿಗೆ ಸಂಗ್ರಹವಾಗಿದ್ದು, ಉಳಿದ ಬಾಕಿ ಮೊತ್ತವನ್ನು ಮಾರ್ಚ್ ಅಂತ್ಯದೊಳಗೆ ವಸೂಲಿ ಮಾಡಲು ಸರ್ಕಾರ ಕೈಗೊಂಡಿರುವ ತುರ್ತು ಕ್ರಮಗಳೇನು: | ದಿನಾಂಕ:09.03.2026 ರ ಅಂತ್ಯಕ್ಕೆ ಶೇ. 77 ರಷ್ಟು ತೆರಿಗೆ ಸಂಗ್ರಹವಾಗಿರುತ್ತದೆ. ಜಿಲ್ಲಾವಾರು ವಿವರವನ್ನು ಅನುಬಂಧ-2ರಲ್ಲಿ ನೀಡಿದೆ.<br><br>ಗ್ರಾಮ ಪಂಚಾಯತಿಗಳು ತೆರಿಗೆ ವಸೂಲಾತಿ ಮಾಡಲು ಕೈಗೊಂಡಿರುವ ಕ್ರಮಗಳು ಈ ಕೆಳಕಂಡಂತಿದೆ.<br><br>1) ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ತೆರಿಗೆ, ದರ ಮತ್ತು ಶುಲ್ಕಗಳು) ನಿಯಮಗಳು, 2025 ರ ಅನ್ವಯ ಇ-ಸ್ವತ್ತು 2.0 ತಂತ್ರಾಂಶವನ್ನು ಅಭಿವೃದ್ಧಿಪಡಿಸಿದ್ದು ಸಾರ್ವಜನಿಕರು ತಮ್ಮ ಆಸ್ತಿಗಳಿಗೆ ಸಂಬಂಧಿಸಿದಂತೆ ನಮೂನೆಗಳನ್ನು ಪಡೆಯುವಲ್ಲಿ ಆಸ್ತಿ ತೆರಿಗೆ ಪಾವತಿಯನ್ನು ಕಡ್ಡಾಯಗೊಳಿಸಲಾಗಿರುತ್ತದೆ.<br><br>2) ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ತೆರಿಗೆ ವಸೂಲಾತಿ ಆಂದೋಲನಗಳನ್ನು ವಿನೂತನವಾಗಿ ಹಮ್ಮಿಕೊಂಡು ಮಾಹಿತಿ, ಶಿಕ್ಷಣ, ಸಂವಹನದ (IEC) ಮೂಲಕ ಕ್ರಮ ವಹಿಸಲಾಗುತ್ತಿರುತ್ತದೆ.<br><br>3) ಸಾರ್ವಜನಿಕರು ತಾವಿರುವಲ್ಲಿಯೇ ತಮ್ಮ ಆಸ್ತಿಗೆ ಸಂಬಂಧಿಸಿದಂತೆ ತೆರಿಗೆ ಪಾವತಿಗಾಗಿ Phone Pay, Google Pay, ಇಲಾಖೆಯ 'ಬಾಪೂಜಿ ಸೇವಾ ಕೇಂದ್ರ' POS Machine ಗಳ ಮೂಲಕ ತೆರಿಗೆ ಪಾವತಿ ಬಗ್ಗೆ ಅವಕಾಶ ಕಲ್ಪಿಸಲಾಗಿರುತ್ತದೆ ಹಾಗೂ ಆಸ್ತಿಯ ಬಗ್ಗೆ ಪಾವತಿಸಬೇಕಾದ ತೆರಿಗೆಯ ವಿವರಗಳನ್ನು ವೀಕ್ಷಿಸಲು ಪಂಚಮಿತ್ರ ತಂತ್ರಾಂಶದಲ್ಲಿ ಅವಕಾಶವನ್ನು ಕಲ್ಪಿಸಲಾಗಿರುತ್ತದೆ.<br><br>4) ಸಾಮಾಜಿಕ ಮಾಧ್ಯಮಗಳಾದ ಇನ್ಸ್ಟಾಗ್ರಾಮ್, ಫೇಸ್ ಬುಕ್, X, ವೃತ್ತ ಪತ್ರಿಕೆಗಳು ಇತರೆ ಮಾಧ್ಯಮಗಳ ಮೂಲಕ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ತೆರಿಗೆ ಪಾವತಿ ಬಗ್ಗೆ ವಿನಾಯಿತಿಗಳ ಬಗ್ಗೆ ಸಾಕಷ್ಟು ಪ್ರಚಾರಗಳನ್ನು ಮಾಡಲಾಗಿರುತ್ತದೆ.<br><br>5) ಗ್ರಾಮ ಪಂಚಾಯತಿಯು ಬಾಕಿ ಇರುವ ತೆರಿಗೆ ಸಂದಾಯಕ್ಕೆ ಹೊಣೆಗಾರನಾಗಿರುವ ವ್ಯಕ್ತಿಗೆ 15 ದಿನಗಳೊಳಗಾಗಿ ಸಂದಾಯ ಮಾಡಲು ತಗಾದೆ ನೋಟೀಸು ನೀಡಬಹುದಾಗಿದೆ. |

| | | |
|---|---|---|
| | | 6) ತಗಾದೆ ನೋಟೀಸು ನೀಡಿದ ನಂತರ ಬಾಕಿ ಮೊತ್ತವನ್ನು ಗ್ರಾಮ ಪಂಚಾಯತಿಗೆ 15 ದಿನಗಳೊಳಗಾಗಿ ಸಂದಾಯ ಮಾಡದಿದ್ದರೆ ತಗಾದೆ ಆದೇಶ ಹೊರಡಿಸಬಹುದಾಗಿದೆ.<br><br>7) ತಗಾದೆ ಆದೇಶ ಜಾರಿ ಮಾಡಿದ ನಂತರ ಬಾಕಿ ಇರುವ ತೆರಿಗೆ ಸಂದಾಯ ಮಾಡದಿದ್ದರೆ ಜಪ್ತಿ, ಮಾರಾಟದ ಮೂಲಕ ತೆರಿಗೆ ಬಾಕಿ ಮೊಬಲಗನ್ನು ವಸೂಲಿ ಮಾಡಿ ಗ್ರಾಮ ಪಂಚಾಯತಿ ನಿಧಿಗೆ ಜಮಾ ಮಾಡಲು ಅವಕಾಶ ಕಲ್ಪಿಸಲಾಗಿದೆ. |
| (ಇ) | ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 199ಕ್ಕೆ ತಂದಿರುವ ತಿದ್ದುಪಡಿಗಳ ಸ್ವರೂಪವೇನು: ಹೊಸದಾಗಿ ಸೇರಿಸಲಾದ ಪ್ರಕರಣ 199ಬಿ ಮತ್ತು 199 ಸಿ ನಿಬಂಧನೆಗಳು ಗ್ರಾಮ ಪಂಚಾಯಿತಿಗಳ ಆರ್ಥಿಕ ಸ್ವಾವಲಂಬನೆಗೆ ಹೇಗೆ ಪೂರಕವಾಗಿವೆ; | • ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ಅಧಿನಿಯಮ, 2025 ಅನ್ನು ದಿನಾಂಕ:07.04.2025 ರಂದು ಅಧಿಸೂಚಿಸಲಾಗಿರುತ್ತದೆ.<br><br>• ಈ ತಿದ್ದುಪಡಿಯನ್ವಯ ಅಧಿನಿಯಮಕ್ಕೆ ಪ್ರಕರಣ 199ಬಿ ಹಾಗೂ 199ಸಿ ಹೊಸ ಪ್ರಕರಣಗಳನ್ನು ಸೇರ್ಪಡೆ ಮಾಡಲಾಗಿರುತ್ತದೆ.<br><br>• ಪ್ರಕರಣ 199ಬಿ ರನ್ವಯ ಕಟ್ಟಡ ನಿರ್ಮಾಣದ ಉದ್ದೇಶಗಳಿಗಾಗಿ ಇರುವ ಕಟ್ಟಡ ನಿವೇಶನಗಳಿಗಾಗಿ ಹೊಸ ಖಾತಾ ಅಥವಾ ಪಿ.ಐ.ಡಿ. ಯನ್ನು ನೀಡಲು ಗ್ರಾಮ ಪಂಚಾಯಿತಿ ಅಥವಾ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಲಾದ ಪ್ರಾಧಿಕಾರಿಗಳು, ಅಧಿಕಾರ ವ್ಯಾಪ್ತಿಯ ಯೋಜನಾ ಪ್ರಾಧಿಕಾರದ ಮೂಲಕ ಲೇಔಟ್ ಪ್ಲಾನಿಗಾಗಿ ಪೂರ್ವಾನುಮೋದನೆಯನ್ನು ಪಡೆದು ಕೊಳ್ಳಬೇಕಾಗಾಗಿರುತ್ತದೆ.<br><br>• ಪ್ರಕರಣ 199ಸಿ ರನ್ವಯ ಕಟ್ಟಡ ಮತ್ತು ಪರಿವರ್ತನೆಯಾಗದಿರುವ ಭೂಮಿ ಅಥವಾ ಪರಿವರ್ತನೆಯಾದ ಭೂಮಿ ಆದರೆ ಕಂದಾಯ ಭೂಮಿಯಲ್ಲಿನ ಅನುಮೋದಿತವಲ್ಲದ ಬಡಾವಣೆಯ ಮೇಲಿನ ತೆರಿಗೆಗಳನ್ನು ವಿಧಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.<br><br>• ಈಗಾಗಲೇ ಗ್ರಾಮ ಪಂಚಾಯಿತಿಗಳಿಂದ ಕುಡಿಯುವ ನೀರು, ಚರಂಡಿ ವ್ಯವಸ್ಥೆ, ಬೀದಿ ದೀಪಗಳಂತಹ ಮೂಲಭೂತ ಸೌಕರ್ಯಗಳನ್ನು ಪಡೆದು ತೆರಿಗೆ ವ್ಯಾಪ್ತಿಯಿಂದ ಹೊರಗುಳಿದಿದ್ದ ಆಸ್ತಿಗಳನ್ನು ತೆರಿಗೆ ವ್ಯಾಪಿಗೆ ಒಳಪಡಿಸುವುದರಿಂದ ಗ್ರಾಮ ಪಂಚಾಯಿತಿಗಳ ಆರ್ಥಿಕ ಸ್ವಾವಲಂಬನೆಗೆ ಪೂರಕವಾಗಿರುತ್ತದೆ. |
| (ಈ) | ಡಿಜಿಟಲ್ ಪಾವತಿ ಸೌಲಭ್ಯ ಆಸ್ತಿ ಮಾಲೀಕರಿಗೆ ಫೋನ್ ಪೇ. ಗೂಗಲ್ ಪೇ ಮತ್ತು ಬಾಪೂಜಿ ಸೇವಾ ಕೇಂದ್ರಗಳ ಮೂಲಕ ತೆರಿಗೆ ಪಾವತಿಸಲು ಅವಕಾಶ ನೀಡಲಾಗಿದೆಯೇ; ಈ ತಂತ್ರಜ್ಞಾನ ಬಳಕೆಯಿಂದ ತೆರಿಗೆ ವಸೂಲಾತಿಯಲ್ಲಿ ಆಗಿರುವ ಪ್ರಗತಿಯೇನು; | ಹೌದು.<br><br>ಆಸ್ತಿ ಮಾಲೀಕರಿಗೆ ತೆರಿಗೆ ಪಾವತಿಸಲು ಡಿಜಿಟಲ್ ಪಾವತಿ ಸೌಲಭ್ಯವನ್ನು ಕಲ್ಪಿಸಲಾಗಿದ್ದು, 2024-25 ಸಾಲಿನಲ್ಲಿ ರೂ.113.43 ಕೋಟಿಗಳು, 2025-26 ನೇ ಸಾಲಿನಲ್ಲಿ ರೂ.135.72 ಕೋಟಿಗಳು ತೆರಿಗೆ ವಸೂಲಾತಿಯಾಗಿರುವ ಪ್ರಗತಿಯ ವಿವರವನ್ನು ಅನುಬಂಧ - 3 ರಲ್ಲಿ ನೀಡಿದೆ. |
| (ಉ) | ಸಂಪನ್ಮೂಲ ಕ್ರೋಢೀಕರಣ ಗ್ರಾಮೀಣ ಪ್ರದೇಶದ ಹೊರವಲಯದಲ್ಲಿ ನಿರ್ಮಾಣವಾಗಿರುವ ಲೇಔಟ್‌ಗಳು ಮತ್ತು ಮನೆಗಳಿಂದ ತೆರಿಗೆ ವಸೂಲಿ ಮಾಡಲು ಸರ್ಕಾರ ಜಾರಿಗೆ ತಂದಿರುವ ಹೊಸ ನಿಯಮಗಳು ಯಾವುವು? | ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ತೆರಿಗೆ, ದರ ಮತ್ತು ಶುಲ್ಕಗಳು) ನಿಯಮಗಳು, 2025 ರನ್ವಯ ಇ-ಸ್ವತ್ತು 2.0 ತಂತ್ರಾಂಶವನ್ನು ಅಭಿವೃದ್ಧಿಪಡಿಸಿದ್ದು, ಸಾರ್ವಜನಿಕರು ತಮ್ಮ ಆಸ್ತಿಗಳಿಗೆ ಸಂಬಂಧಿಸಿದಂತೆ ನಮೂನೆಗಳನ್ನು ಪಡೆಯುವಲ್ಲಿ ಆಸ್ತಿ ತೆರಿಗೆ ಪಾವತಿಯನ್ನು ಕಡ್ಡಾಯ ಗೊಳಿಸಲಾಗಿರುತ್ತದೆ. ಇದರಿಂದಾಗಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ತೆರಿಗೆಗೆ ಒಳಪಡದ ಎಲ್ಲಾ ಆಸ್ತಿಗಳನ್ನು ತೆರಿಗೆ ವ್ಯಾಪ್ತಿಗೆ ಒಳಪಡಿಸಬಹುದಾಗಿದ್ದು, ಗ್ರಾಮ ಪಂಚಾಯತಿಗಳ ಸ್ವಂತ ಸಂಪನ್ಮೂಲ ಗಣನೀಯವಾಗಿ ಹೆಚ್ಚಳವಾಗಲಿದ್ದು, ಆರ್ಥಿಕ ಸ್ವಾವಲಂಬನೆಗೆ ಪೂರಕವಾಗಿರುತ್ತದೆ. |

ಸಂಖ್ಯೆ: ಗ್ರಾಅಪ 247 ಗ್ರಾಪಂಅ 2026

(ಪ್ರಿಯಾಂಕ್ ಖರ್ಗೆ)

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ

ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.

## ಅನುಬಂಧ-1

### DCB Report:2025-26, Dated:18.02.2026

| Sr. No. | District | Number of GPs | Opening Balance (Rs In Crore) | Current Demand (Rs In Crore) | Total Demand (Rs In Crore) | Total Collection (Rs In Crore) | Balance (Rs In Crore) | % of Collection against Current Demand | % of Collection against Total Demand |
|---|---|---|---|---|---|---|---|---|---|
| 1 | TUMAKURU | 330 | 167.73 | 77.50 | 245.23 | 42.49 | 202.51 | 55 | 17 |
| 2 | MYSURU | 256 | 98.58 | 84.40 | 182.98 | 46.87 | 135.76 | 56 | 26 |
| 3 | VIJAYAPURA | 211 | 109.32 | 36.62 | 145.94 | 21.00 | 124.92 | 57 | 14 |
| 4 | VIJAYANAGAR | 137 | 71.47 | 28.73 | 100.20 | 17.48 | 82.69 | 61 | 17 |
| 5 | KALABURAGI | 261 | 124.34 | 37.43 | 161.77 | 23.41 | 138.32 | 63 | 14 |
| 6 | CHAMARAJANAGARA | 130 | 49.08 | 18.38 | 67.45 | 11.53 | 55.88 | 63 | 17 |
| 7 | HAVERI | 223 | 107.16 | 39.87 | 147.03 | 25.42 | 121.58 | 64 | 17 |
| 8 | CHITRADURGA | 189 | 115.66 | 35.97 | 151.63 | 22.98 | 128.57 | 64 | 15 |
| 9 | BIDAR | 183 | 75.96 | 18.82 | 94.78 | 12.44 | 82.32 | 66 | 13 |
| 10 | HASSAN | 264 | 80.82 | 47.95 | 128.77 | 31.85 | 96.83 | 66 | 25 |
| 11 | BENGALURU | 85 | 614.68 | 412.42 | 1027.10 | 273.98 | 749.56 | 66 | 27 |
| 12 | DHARWAR | 146 | 52.47 | 25.30 | 77.77 | 17.23 | 60.44 | 68 | 22 |
| 13 | BALLARI | 100 | 19.63 | 14.53 | 34.16 | 10.14 | 23.98 | 70 | 30 |
| 14 | DAVANAGERE | 194 | 60.07 | 34.18 | 94.25 | 23.86 | 70.30 | 70 | 25 |
| 15 | KOPPAL | 153 | 48.73 | 20.38 | 69.12 | 14.25 | 54.81 | 70 | 21 |
| 16 | KOLAR | 154 | 76.83 | 48.64 | 125.47 | 36.83 | 88.31 | 76 | 29 |
| 17 | BELAGAVI | 500 | 261.41 | 105.51 | 366.92 | 80.42 | 286.36 | 76 | 22 |
| 18 | GADAG | 122 | 46.86 | 13.74 | 60.60 | 10.47 | 50.10 | 76 | 17 |
| 19 | YADGIR | 122 | 41.49 | 16.62 | 58.11 | 12.82 | 45.27 | 77 | 22 |
| 20 | KODAGU | 102 | 14.08 | 16.90 | 30.98 | 13.14 | 17.73 | 78 | 42 |
| 21 | UDUPI | 155 | 11.22 | 39.18 | 50.40 | 30.53 | 19.43 | 78 | 61 |
| 22 | BENGALURU RURAL | 101 | 152.68 | 143.07 | 295.75 | 112.94 | 181.53 | 79 | 38 |
| 23 | BAGALKOTE | 196 | 76.26 | 31.10 | 107.36 | 25.97 | 81.34 | 84 | 24 |
| 24 | MANDYA | 233 | 161.98 | 52.58 | 214.56 | 45.46 | 168.88 | 86 | 21 |
| 25 | CHIKKAMAGALURU | 226 | 37.51 | 32.13 | 69.64 | 28.38 | 41.11 | 88 | 41 |
| 26 | DAKSHINA KANNADA | 223 | 12.84 | 43.14 | 55.97 | 38.33 | 17.11 | 89 | 68 |
| 27 | BENGALURU SOUTH | 126 | 79.80 | 51.66 | 131.47 | 45.94 | 85.12 | 89 | 35 |
| 28 | SHIVAMOGGA | 262 | 26.80 | 27.57 | 54.37 | 24.78 | 29.41 | 90 | 46 |
| 29 | UTTARA KANNADA | 229 | 3.82 | 17.69 | 21.51 | 16.18 | 5.26 | 91 | 75 |
| 30 | CHIKKABALLAPURA | 157 | 72.07 | 27.50 | 99.57 | 28.85 | 70.55 | 105 | 29 |
| 31 | RAICHUR | 179 | 26.85 | 16.51 | 43.36 | 17.87 | 25.44 | 108 | 41 |
| | Grand Total | 5949 | 2898.20 | 1616.00 | 4514.20 | 1163.84 | 3341.42 | 72 | 26 |

ಅನುಬಂಧ-2 09.03.2026

DCB Report:2025-26, Dated 02.03.2026

| Sr. No. | District | Number of GPs | Opening Balance (Rs In Crore) | Current Demand (Rs In Crore) | Total Demand (Rs In Crore) | Total Collection (Rs In Crore) | Balance (Rs In Crore) | % of Collection against Current Demand | % of Collection against Total Demand |
|---|---|---|---|---|---|---|---|---|---|
| 1 | TUMAKURU | 330 | 166.10 | 77.12 | 243.22 | 44.43 | 198.56 | 58 | 18 |
| 2 | VIJAYANAGAR | 137 | 71.47 | 28.75 | 100.22 | 17.92 | 82.28 | 62 | 18 |
| 3 | VIJAYAPURA | 211 | 109.07 | 36.28 | 145.35 | 22.62 | 122.71 | 62 | 16 |
| 4 | CHAMARAJANAGARA | 130 | 48.97 | 18.33 | 67.31 | 12.06 | 55.21 | 66 | 18 |
| 5 | HAVERI | 223 | 107.20 | 39.82 | 147.03 | 26.40 | 120.59 | 66 | 18 |
| 6 | CHITRADURGA | 189 | 115.53 | 35.92 | 151.45 | 23.88 | 127.50 | 66 | 16 |
| 7 | KALABURAGI | 261 | 124.02 | 37.31 | 161.33 | 24.90 | 136.39 | 67 | 15 |
| 8 | BENGALURU | 85 | 615.00 | 413.48 | 1028.48 | 281.87 | 743.05 | 68 | 27 |
| 9 | MYSURU | 255 | 93.63 | 72.49 | 166.12 | 49.75 | 116.01 | 69 | 30 |
| 10 | DAVANAGERE | 194 | 59.91 | 34.16 | 94.07 | 24.07 | 69.91 | 70 | 26 |
| 11 | DHARWAR | 146 | 52.45 | 25.31 | 77.76 | 17.87 | 59.78 | 71 | 23 |
| 12 | BIDAR | 183 | 75.90 | 18.65 | 94.54 | 13.29 | 81.23 | 71 | 14 |
| 13 | HASSAN | 264 | 80.17 | 47.49 | 127.66 | 33.90 | 93.67 | 71 | 27 |
| 14 | KOPPAL | 153 | 48.84 | 20.37 | 69.21 | 14.66 | 54.50 | 72 | 21 |
| 15 | BALLARI | 100 | 19.63 | 14.62 | 34.25 | 10.57 | 23.64 | 72 | 31 |
| 16 | KOLAR | 154 | 76.73 | 48.60 | 125.33 | 37.81 | 87.18 | 78 | 30 |
| 17 | GADAG | 122 | 46.71 | 13.76 | 60.47 | 11.09 | 49.36 | 81 | 18 |
| 18 | BELAGAVI | 497 | 259.87 | 105.09 | 364.96 | 85.09 | 279.73 | 81 | 23 |
| 19 | KODAGU | 102 | 14.08 | 16.89 | 30.97 | 13.70 | 17.17 | 81 | 44 |
| 20 | BENGALURU RURAL | 101 | 152.38 | 142.86 | 295.24 | 116.01 | 177.95 | 81 | 39 |
| 21 | YADGIR | 122 | 40.82 | 16.24 | 57.06 | 13.30 | 43.75 | 82 | 23 |
| 22 | UDUPI | 155 | 11.14 | 39.26 | 50.41 | 32.16 | 17.80 | 82 | 64 |
| 23 | BAGALKOTE | 196 | 76.16 | 30.91 | 107.07 | 26.42 | 80.60 | 85 | 25 |
| 24 | MANDYA | 231 | 161.97 | 52.55 | 214.52 | 46.49 | 167.81 | 88 | 22 |
| 25 | DAKSHINA KANNADA | 223 | 12.63 | 43.18 | 55.81 | 39.84 | 15.44 | 92 | 71 |
| 26 | BENGALURU SOUTH | 126 | 79.87 | 51.47 | 131.35 | 47.85 | 83.08 | 93 | 36 |
| 27 | SHIVAMOGGA | 262 | 26.65 | 27.53 | 54.19 | 25.72 | 28.29 | 93 | 47 |
| 28 | UTTARA KANNADA | 229 | 3.80 | 17.75 | 21.55 | 16.64 | 4.84 | 94 | 77 |
| 29 | CHIKKAMAGALURU | 226 | 37.36 | 32.00 | 69.36 | 30.45 | 38.76 | 95 | 44 |
| 30 | CHIKKABALLAPURA | 157 | 71.98 | 27.67 | 99.64 | 29.22 | 70.25 | 106 | 29 |
| 31 | RAICHUR | 179 | 26.83 | 16.70 | 43.53 | 18.45 | 25.03 | 110 | 42 |
| | Grand Total | 5943 | 2886.90 | 1602.56 | 4489.46 | 1208.43 | 3272.09 | 75 | 27 |

Amount (In Rs Crores)

## ಅನುಬಂಧ-3

| FY | No. of transactions one through BBPS | Total amount collected through BBPS | No. of transactions done through PoS (In Crores) | Total amount collected through PoS | No. of transactions done through Payment Gateway | Total amount collected through Payment Gateway |
|---|---|---|---|---|---|---|
| 2024-25 | 42302 | 21.75 | 4577967 | 1775.85 | 14868946 | 113.43 |
| 2025-26 | 87862 | 38.59 | 3853228 | 569.23 | 20065598 | 135.72 |